ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/53/2016-17. ದಿನಾಂಕ:26-09-2016.

| ವಾದಿಗಳು | ಪ್ರತಿವಾದಿಗಳು |
|---|---|
| ಹುಣಸಿಕಟ್ಟೆ ಗಂಗಮ್ಮ ಗಂಡ ಲೇಟ್ ಶಿವಪ್ಪ<br>ಕೆ.ಅಯ್ಯನಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಕೊಟ್ಟೂರು |
| ಕೂಡ್ಲಿಗಿ ತಾಲೂಕು ಕೆ.ಅಯ್ಯನಹಳ್ಳಿ ಗ್ರಾಮದ ಸನಂ 230ಎ. 230ಬಿ. 230ಸಿ. 240ಎ. 422ಸಿ. 425ಎ. 439ಎ. 440ಇ. ವಿಸ್ತೀರ್ಣ 1-49. 0-98. 3-55. 1-70. 2-25. 1-74. 0-54. 0-84. ಎಕ್ರೆ ಜಮೀನುಗಳನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಕೆ.ಅಯ್ಯನಹಳ್ಳಿ ಗ್ರಾಮದ ಸನಂ 230ಎ. 230ಬಿ. 230ಸಿ. 240ಎ. 422ಸಿ. 425ಎ. 439ಎ. 440ಇ. ವಿಸ್ತೀರ್ಣ 1-49. 0-98. 3-55. 1-70. 2-25. 1-74. 0-54. 0-84. ಎಕ್ರೆ ಜಮೀನುಗಳನ್ನು ಸದರಿ ಗ್ರಾಮದ ಗಂಗಮ್ಮ ಗಂಡ ಲೇಟ್ ಶಿವಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಕೆ.ಅಯ್ಯನಹಳ್ಳಿ ಇವರು ನಮೂನೆ-21 ನೋಟಿಸನ್ನು ದಿನಾಂಕ 11-05-2016. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ನಮೂನೆ-21 ಕ್ಕೂ ಹಾಗೂ ವಂಶವೃಕ್ಷಕ್ಕೂ ತಾಳೆ ಇಲ್ಲದ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 96/2015-16. ದಿನಾಂಕ 10-06-2016. ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 06-09-2016. ರಿಂದ 26-09-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಕೆ.ಅಯ್ಯನಹಳ್ಳಿ ಗ್ರಾಮದ ಸನಂ 230ಎ. 230ಬಿ. 230ಸಿ. 240ಎ. 422ಸಿ. 425ಎ. 439ಎ. 440ಇ. ವಿಸ್ತೀರ್ಣ 1-49. 0-98. 3-55. 1-70. 2-25. 1-74. 0-54. 0-84. ಎಕ್ರೆ ಜಮೀನುಗಳು ನಮ್ಮ ಮಾವನವರಾದ ಹುಣಸಿಕಟ್ಟೆ ದುರುಗಪ್ಪ ತಂದೆ ನಾಗಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 08-10-2008 ರಂದು ಹಾಗೂ ನಮ್ಮ ಅತ್ತೇಯವರಾದ ಗೌರಮ್ಮ ಗಂಡ ಹುಣಸಿಕಟ್ಟೆ ದುರುಗಪ್ಪ ಇವರು ದಿನಾಂಕ 05-06-1980 ರಂದು ಹಾಗೂ ನನ್ನ ಗಂಡನಾದ ಹುಣಸಿಕಟ್ಟೆ ಶಿವಪ್ಪ ತಂದೆ ದುರುಗಪ್ಪ ಇವರು ದಿನಾಂಕ: 23-11-2000 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ಅರ್ಜಿದಾರರು ಎಲ್ಲಾ ವಾರಸುದಾರರ ಹೆಸರನ್ನು ಸೇರಿಸಿ ಅರ್ಜಿ ನೀಡದ ಕಾರಣ ಮತ್ತು ಚೆಕ್‌ಲಿಸ್ಟ್‌ನಲ್ಲಿ ಹೆಸರು ತಪ್ಪಾಗಿರುವ ಕಾರಣ ಅರ್ಜಿದಾರರ ಕೋರಿಕೆಯನ್ನು ತಿರಸ್ಕರಿಸುತ್ತಾ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

ಪು.ತಿ.ನೋ-2.

**-:ಆದೇಶ:-**

1. ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಕೆ.ಅಯ್ಯನಹಳ್ಳಿ ಗ್ರಾಮದ ಸನಂ 230ಎ. 230ಬಿ. 230ಸಿ. 240ಎ. 422ಸಿ. 425ಎ. 439ಎ. 440ಇ. ವಿಸ್ತೀರ್ಣ 1-49. 0-98. 3-55. 1-70. 2-25. 1-74. 0-54. 0-84. ಎಕ್ರೆ ಜಮೀನುಗಳ ಅರ್ಜಿದಾರರು ಎಲ್ಲಾ ವಾರಸುದಾರರ ಹೆಸರನ್ನು ಸೇರಿಸಿ ಅರ್ಜಿ ನೀಡದ ಕಾರಣ ಹಾಗೂ ಚೆಕ್‌ಲಿಸ್ಟ್ ತಪ್ಪಾಗಿರುವ ಕಾರಣ ಅರ್ಜಿದಾರರ ಕೋರಿಕೆಯನ್ನು ತಿರಸ್ಕರಿಸುತ್ತಾ ಪಹಣಿಯನ್ನು ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 26-09-2016. ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಹುಣಸಿಕಟ್ಟೆ ಗಂಗಮ್ಮ ಗರಡಿ ಲೇಟ್ ಶಿವಪ್ಪ ಕೆ.ಅಯ್ಯನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಕೊಟ್ಟೂರು ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.